# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 38 ಫ್ರಾ.ಸಾ. : 17**

| | | |
|---|---|---|
| ಸಾಕ್ಷಿಯ ಹೆಸರು | : | ಸಾವಿತ್ರಿ ಎ. ನಾಯಕ್ |
| ಗಂಡನ ಹೆಸರು | : | ಆನಂದು ನಾಯಕ್ |
| ವಯಸ್ಸು | : | 53 ವರ್ಷ |
| ಕೆಲಸ | : | ಪೊಲೀಸ್ ಉಪ ನಿರೀಕ್ಷಕರು, ಕುಮಟಾ |
| ವಾಸ | : | ಕುಮಟಾ |

**ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಆಗಸ್ಟ್ 2018 ರಿಂದ ಜುಲೈ 2022 ವರೆಗೆ ನಾನು ಹೊನ್ನಾವರದ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.03-05-2021 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ, ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಕುಮಟಾದ ಸರಕಾರಿ ಆಸ್ಪತ್ರೆಯಿಂದ ಮತ್ತು ಕುಮಟಾ ಪೊಲೀಸ್ ಠಾಣೆಯಿಂದ ನಮ್ಮ ಠಾಣೆಗೆ ದೂರವಾಣಿ ಕರೆ ಬಂದಿದ್ದು, ಸದರಿ ಕರೆ ಮಾಡಿದ ವ್ಯಕ್ತಿಯು, ಹೊನ್ನಾವರ ತಾಲೂಕಿನ ಚಂದಾವರದ ಜನತಾ ಕಾಲೋನಿಯ ನಿವಾಸಿಯೊಬ್ಬರು ಚಾಕು ಇರಿತಕ್ಕೊಳಗಾಗಿ ಮೃತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಜನತಾ ಕಾಲೋನಿಯು ನಮ್ಮ ಠಾಣಾ ಸರಹದ್ದಿನಲ್ಲಿ ಬರುತ್ತಿದ್ದ ಕಾರಣ, ಮಾಹಿತಿ ಬಂದ ಕೂಡಲೇ ನಾನು ಕುಮಟಾದ ಸರಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ, ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಹಾಸಿಗೆ ಮೇಲೆ ವ್ಯಕ್ತಿಯೊಬ್ಬರ ಶವವಿದ್ದು, ಪಕ್ಕದಲ್ಲಿದ್ದ ಆತನ ಹೆಂಡತಿಯನ್ನು ವಿಚಾರಿಸಿದಾಗ ಮೃತ ವ್ಯಕ್ತಿ ನನ್ನ ಗಂಡನಾಗಿದ್ದು, ಆತನ ಹೆಸರು ಅಬು ತಾಲೀಬ್ ಎಂದು ಹೇಳಿರುತ್ತಾಳೆ ಹಾಗೂ ಅದೇ ಜನತಾ ಕಾಲೋನಿಯ ಅಬ್ದುಲ್ ಸಲೀನ್ ಎನ್ನುವವನು ಚಾಕುವಿನಿಂದ ಇರಿದು ಕೊಲೆ ಮಾಡಿರುತಾನೆ ಎಂದು ತಿಳಿಸಿರುತ್ತಾಳೆ. ಆಕೆಯು ದುಖಃ ದಲ್ಲಿದ್ದ ಕಾರಣ, ಆಕೆಯು ತನ್ನ ಪಕ್ಕದಲ್ಲಿದ ಆಕೆಯ ಸಂಬಂಧಿಯಾದ ಚಾಸಾ-18

ಕಲೀಮುದ್ದೀನ್ ರವರ ಮೂಲಕ ಪಿರ್ಯಾದನ್ನು ಬರೆಸಿ, ಅದಕ್ಕೆ ತನ್ನ ಸಹಿ ಮಾಡಿ, ನಂತರ ಸದರಿ ದೂರನ್ನು ನನಗೆ ನೀಡಿರುತ್ತಾರೆ. ದೂರನ್ನು ಪಡೆದ ನಂತರ ನಾನು ಠಾಣೆಗೆ ಹಿಂದಿರುಗಿ ಠಾಣಾ ಗುನ್ನಾ ನಂ.136/2021 ರಲ್ಲಿ ಪ್ರಕರಣ ದಾಖಲಿಸಿಕೊಂಡು, ಪ್ರ.ವ.ವರದಿ ಹಾಗೂ ದೂರನ್ನು ನಮ್ಮ ಸಿಬ್ಬಂದಿಯಾದ ಚಾಸಾ–30 ನಂದೀಶರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಹಾಗೂ ಅದರ ಪ್ರತಿಗಳನ್ನು ಇ–ಮೇಲ್ ಮೂಲಕ ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಸದರಿ ಪ್ರಕರಣವು ಘೋರ ಪ್ರಕರಣವಾದ್ದರಿಂದ, ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–8 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ತಾನು ಸ್ವೀಕರಿಸಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–10 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–10(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ದಾಖಲಿಸಿದ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–74 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–74(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

2. ಕುಮಟಾ ಆಸ್ಪತ್ರೆಯಿಂದ ಯಾವುದೇ ಕರೆ ಬಂದಿಲ್ಲ ಹಾಗೂ ಚಾಕು ಇರಿತಕ್ಕೊಳಗಾಗಿ ಮೃತಪಟ್ಟ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಮೃತ ವ್ಯಕ್ತಿಯ ಹೆಂಡತಿಯಿಂದ ಯಾವುದೇ ಮಾಹಿತಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ಜಮೀನಾಬಿ ರವರಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ, ಆದರೆ ಮಾತನಾಡಲು ಬರುತ್ತದೆ. ಚಾಸಾ–1 ರವರು ಚಾಸಾ–18 ರವರ ಮೂಲಕ ಯಾವುದೇ ದೂರನ್ನು ಬರೆಸಿ, ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ಯಾವುದೇ ದೂರನ್ನು ನೀಡದೇ ಇದ್ದರೂ ಸಹ, ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ